

# ಹೆಸರು ಉಳಿಸುವ ತವಕ

ಚರಿತ್ರೆಯ ಅರಿವಿಲ್ಲದವನು ವರ್ತಮಾನವನ್ನು ಬೆಳಗಿಸಲಾರ, ಭವಿಷ್ಯವನ್ನೂ ಕಟ್ಟಲಾರ ಎಂಬ ಮಾತೊಂದಿದೆ. ಈಗ ನವ ಕರ್ನಾಟಕ ನಿರ್ಮಾಣದ ಸದಾಶಯವನ್ನು ಮುಂದಿಟ್ಟು ಯೋಜನೆ ರೂಪಿಸುವ ಜತೆಗೆ ನಾಡು ಕಟ್ಟಿದವರು, ನಾಡಿಗಾಗಿ ತಮ್ಮ ಜೀವವನ್ನೇ ಮುಡಿಪಿಟ್ಟವರು, ಭಾಷೆಯನ್ನು ಬೆಳಗಿಸಿದವರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಮಹತ್ವದ ಕಾಯಕಗಳಲ್ಲಿ ಒಂದು. ನಾಡಿನ ಪರಂಪರೆಯನ್ನು, ಮಹಾನ್ ದಾರ್ಶನಿಕರನ್ನು ಅನುದಿನವೂ ನೆನೆಯುವುದು ಕೂಡ ಅವಶ್ಯಕ.

ಈ ಕೆಲಸವನ್ನು ಸಿದ್ದರಾಮಯ್ಯ ಹೃದಯಪೂರ್ವಕ ಹಾಗೂ ಪ್ರಜ್ಞಾಪೂರ್ವಕವಾಗಿ ಮಾಡಿದರು.

ದಾರ್ಶನಿಕ ಕವಿ ಕುವೆಂಪು ಅವರ ಜಯಂತಿಯನ್ನು ವಿಶ್ವಮಾನವ ಜಯಂತಿ ಎಂದು ಆಚರಿಸುವುದಾಗಿ ಸರ್ಕಾರ ಘೋಷಿಸಿತು. ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ನಾಡಹಬ್ಬವಾಗಿ ಆಚರಿಸಲು ಮುಂದಾಯಿತು.

ಇದರ ಜತೆಗೆ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ಮೈಸೂರು ಹುಲಿ ಟಿಪ್ಪು ಸುಲ್ತಾನ್, ಕವಿ ಸರ್ವಜ್ಞ, ವಚನಕಾರರಾದ ದೇವರ ದಾಸಿಮಯ್ಯ, ಸೊನ್ನಲಿಗೆಯ ಸಿದ್ದರಾಮ, ಅಂಬಿಗರ ಚೌಡಯ್ಯ ಜಯಂತಿ ಆಚರಣೆಗೂ ಆದ್ಯತೆ ನೀಡಲಾಯಿತು. ಎಲ್ಲ ಜಾತಿಯ ಜನರೂ ಒಂದೇ ಎಂಬ ಭಾವದಲ್ಲಿ ಶ್ರೀಕೃಷ್ಣ, ಶಂಕರಾಚಾರ್ಯರು, ಭಗೀರಥ, ಶಿವಾಜಿ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸುವ ಪರಿಪಾಠ ರೂಪಿಸಲಾಯಿತು.

ಕಾಯಕ ಜೀವಿಗಳ ಚಳವಳಿಯ ನೇತಾರರೂ, ಕಲ್ಯಾಣ ಕ್ರಾಂತಿಯ ರೂವಾರಿಯೂ ಆಗಿರುವ ಬಸವೇಶ್ವರ ಕರ್ಮಭೂಮಿ ಬಸವ ಕಲ್ಯಾಣ ಹಾಗೂ ಐಕ್ಯ ಸ್ಥಳ ಕೂಡಲಸಂಗಮ ಅಭಿವೃದ್ಧಿಗೆ ವಿಶೇಷ ಆದ್ಯತೆ, ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ, ಪೋರ್ಚುಗೀಸ್ರ ವಿರುದ್ಧ ಹೋರಾಡಿದ ಕಾಳು ಮೆಣಸಿನ ರಾಣಿ ಅಬ್ಬಕ್ಕ ಭವನ ಸ್ಥಾಪನೆಗೆ ಆರ್ಥಿಕ ನೆರವು ನೀಡಲು ಸರ್ಕಾರ ವಿಶೇಷ ಕ್ರಮ ಕೈಗೊಂಡಿದೆ.

ಇದರ ಜತೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮಸ್ಥಾನ ಮತ್ತು ನೇಣಿಗೇರಿಸಿದ ಸ್ಥಳವನ್ನು ಸ್ಮಾರಕವಾಗಿ ಅಭಿವೃದ್ಧಿ, ರಾಯಣ್ಣನ ಹೆಸರಿನಲ್ಲಿ ಸೈನಿಕ ಶಾಲೆಯನ್ನು ನಿರ್ಮಾಣ ಮಾಡುವ ಕೈಂಕರ್ಯವನ್ನು ಸರ್ಕಾರ ಆಸ್ಥೆ ತೋರಿದೆ. ರಾಯಣ್ಣನಂತಹ ಹುತಾತ್ಮನ ಜನ್ಮಭೂಮಿ ಮತ್ತು ಬಲಿದಾನ ಮಾಡಿದ ಸ್ಥಳವನ್ನು ಇಲ್ಲಿಯವರೆಗೂ ಕಡೆಗಣಿಸಲಾಗಿತ್ತು. ಅಂತಹ ವೀರನನ್ನು ಶಾಶ್ವತವಾಗಿ ಸ್ಮರಿಸುವ ಸ್ತುತ್ಯಾರ್ಹ ಯೋಜನೆಯನ್ನು ಸರ್ಕಾರ ರೂಪಿಸಿದೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪಾರದರ್ಶಕ ಮತ್ತು ಕಲಾವಿದರ ಪರವಾದ ನೀತಿ ಜಾರಿಗೊಳಿಸಲು ಉದ್ಯುಕ್ತವಾಗಿದೆ. ಕಾಗದ ರಹಿತವಾದ ಇ-ಆಡಳಿತ ವ್ಯವಸ್ಥೆ ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸಿದೆ. ಮತ್ತಷ್ಟು ಯೋಜನೆಗಳು, ಕನಸುಗಳೊಂದಿಗೆ ಇಲಾಖೆ ಮುಂದಡಿಯಿಡುತ್ತಿದೆ.

ಕನ್ನಡದ ಹಿರಿಮೆ-ಗರಿಮೆಯನ್ನು ಜಗದಗಲ, ಮುಗಿಲಗಲಕ್ಕೆ ವಿಸ್ತರಿಸುವ ನಿಟ್ಟಿನಲ್ಲಿ ಇಲಾಖೆ ತೊಡಗಿದೆ. ನಾಡಿನ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರವನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ನಾಡಿನ ಸಾಹಿತಿ, ಕಲಾವಿದರನ್ನು ಪ್ರೋತ್ಸಾಹಿಸುವ ಇನ್ನಷ್ಟು ಅರ್ಥಪೂರ್ಣ ಯೋಜನೆಗಳೊಂದಿಗೆ ದಿಟ್ಟ ಹೆಜ್ಜೆಗಳನ್ನಿಡಲು ಇಲಾಖೆ ಬದ್ಧವಾಗಿದೆ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸಂರಕ್ಷಣೆ, ಸಂವರ್ಧನೆಗಾಗಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತಿದೆ.

**-ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಸಚಿವೆ.**



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕನ್ನಡವನ್ನು ಅನುಷ್ಠಾನಗೊಳಿಸುವ ಕೆಲಸ ಈ ಸರ್ಕಾರದ ಅವಧಿಯಲ್ಲಿ ಹೆಚ್ಚಾಗಿ ನಡೆಯುತ್ತಿದೆ. ಕೋರ್ಟ್, ಇಂಜಿನಿಯರಿಂಗ್ ಮತ್ತಿತರ ಕಡೆಗಳಲ್ಲಿ ಕನ್ನಡೀಕರಣ ಆಗಬೇಕಿದೆ. ಈ ಬಗ್ಗೆ ಸರ್ಕಾರ ಹೆಚ್ಚು ಆದ್ಯತೆ ನೀಡಬೇಕು.

ಹಿಂದಿ ಹೇರಿಕೆ ವಿಷಯವಾಗಿ ರಾಜ್ಯದಲ್ಲಿ ಗಂಭೀರವಾದ ಚರ್ಚೆ ನಡೆಯಿತು. ಇದು ಸಕಾರಾತ್ಮಕ ಬೆಳವಣಿಗೆ.

ಆಡಳಿತದಲ್ಲಿ ಕನ್ನಡ ಅನುಷ್ಠಾನ ಎಂಬುದು ಸುದೀರ್ಘ ಪಯಣ. ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ಮುಂದಿನ ದಿನಗಳಲ್ಲಿ ಫಲಿತಾಂಶ ಸಿಗುವ ಭರವಸೆ ಮೂಡಿದೆ. ಇದು ಆಶಾದಾಯಕ ಬೆಳವಣಿಗೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅನುದಾನ ನೀಡುವ ವಿಷಯದಲ್ಲಿ ಸರ್ಕಾರದ ಉದಾರತೆ ಎದ್ದು ಕಾಣುತ್ತದೆ. ದೇಶದ ಯಾವುದೇ ರಾಜ್ಯಗಳೂ ನೀಡದಷ್ಟು ಅನುದಾನವನ್ನು ಸಿದ್ದರಾಮಯ್ಯ ಸರ್ಕಾರ ಬಜೆಟ್‌ನಲ್ಲಿ ನೀಡುತ್ತಿದೆ.

**-ಕೆ.ಎಸ್.ವಿಮಲಾ, ಸಂಚಾಲಕಿ, ಜನವಾದಿ ಮಹಿಳಾ ಸಂಘಟನೆ.**